## ನವೆಂಬರ್ 5, 2017 ಭಾನುವಾರ

## ವಿಶ್ವ ಸಬ್ಬತ್ ಶಾಲಾದಿನ/ಜಾಗತಿಕ ಭಾನುವಾರ ಶಾಲಾ ದಿನಾಚರಣೆ

### ವಿಶ್ವಾಸದಲ್ಲಿ ಸಂರಕ್ಷಿಸಲ್ಪಡುವುದು ಅಥವಾ ನಂಬಿಕೆಯಲ್ಲಿನ ಪರಿಪಾಲನೆ

ಮಕ್ಕಳು ಆರಾಧನಾ ಕ್ರಮವನ್ನು ನಡೆಸಿಕೊಡುವರು.
(ಮಕ್ಕಳು ಮೆರವಣಿಗೆಯಲ್ಲಿ ತಮಗೆ ಪ್ರಿಯವಾದ ಆಟದ ಸಾಮಾನಿನೊಡನೆ ಹಣ್ಣು ಅಥವಾ ಇತರೆ ಬಹುಮಾನಗಳೊಡನೆ ಸಂತೋಷದಿಂದ ನೃತ್ಯಮಾಡುತ್ತಾ ಬರುವರು. ಮತ್ತುಅವುಗಳನ್ನು ಆಲಯದ ಗರ್ಭಗುಡಿಯ ಮೇಜಿನ ಮೇಜಿನ ಮೇಲೆ ಇಡುವುದು. ಕೃತಜ್ಞತಾ ಪ್ರಾರ್ಥನೆ ಆದನಂತರ ಅವರು ತಂದ ಈ ಬಹುಮಾನಗಳನ್ನು ಒಬ್ಬರಿಗೊಬ್ಬರು ವಿನಿಮಯಮಾಡಿಕೊಳ್ಳುವರು.)

**ಆರಾಧನೆಗೆ ಕರೆ :–**

ನಾವು ವಿಶ್ವಾಸಿಸುವ ಓ ದೇವರೇ, ವಿಶ್ವ ಸಬ್ಬತ್ ಶಾಲಾದಿನವೆಂದು ಆಚರಿಸಲ್ಪಡುವ ಈ ಸಂದರ್ಭದಲ್ಲಿ ಪಾಲನೆ ಮಾಡುವಂತಹ ನಿನ್ನ ಪ್ರಸನ್ನತೆಗಾಗಿ ಮೊರೆಯಿಡುವವರಾಗಿದ್ದೇವೆ. ನೀನು ಮಕ್ಕಳನ್ನು ಹಾಗೂ ಪ್ರಾಯದವರನ್ನು ನಿನ್ನ ಸ್ವರೂಪ್ಯದಲ್ಲಿ ಸೃಷ್ಟಿಮಾಡಿ ನಾವೆಲ್ಲರೂ ನಿನ್ನನ್ನು ಪ್ರತಿಫಲಿಸುವಂತೆ ಮಾಡಿದ್ದಿ.

ದೇವಸುತನಾದ ಓ ಕ್ರಿಸ್ತನೇ, ನಮ್ಮಲ್ಲಿ ನಂಬಿಕೆಯನ್ನು ಹುಟ್ಟಿಸುವವನೇ ಚಿಕ್ಕಮಕ್ಕಳಾದ ನಮ್ಮನ್ನು ಪರಿಪಾಲನೆ ಮಾಡಿ, ಕ್ರಿಸ್ತೀಯ ಮೌಲ್ಯದಲ್ಲಿ ಬೆಳೆಯುವಂತೆ ಮಾಡಿದ ನಿನ್ನ ಕೃಪೆ ಮತ್ತು ಕರುಣೆಗಾಗಿ ಮೊರೆಯಿಡುತ್ತೇವೆ. ನೀನು ಈ ಲೋಕಕ್ಕೆ ಮಗುವಾಗಿ ಅವತರಿಸುವ ಆಯ್ಕೆಯನ್ನು ಆರಿಸಿಕೊಂಡಿ.

ಪವಿತ್ರಾತ್ಮನಾದ ಓ ದೇವರೇ, ದೇವರ ವಾಕ್ಯದಲ್ಲಿ ಬೆಳೆದು ಪೋಷಣೆಹೊಂದಿ ಮುರಿಯಲ್ಪಟ್ಟ ಮನುಷ್ಯಜಾತಿ ಹಾಗೂ ಪ್ರಪಂಚವನ್ನು ವಾಸಿಮಾಡುವಂತಹ ದೇವರ ಸಾಧನಗಳು ನಾವಾಗುವಂತೆ ನಮ್ಮನ್ನು ಪ್ರೇರೇಪಿಸು. ನೀನು ಜನಾಂಗಗಳನ್ನು ಪ್ರೀತಿಯಿಂದ ಒಗ್ಗೂಡಿಸುವವನಾಗಿದ್ದೀ.

ಪ್ರೀತಿಯ ಹೆತ್ತವರೇ ಮತ್ತು ಕ್ರಿಸ್ತನಲ್ಲಿ ಸ್ನೇಹಿತರೇ, ನಾವು ತ್ರಯೈಕ ದೇವರ ನಾಮದಲ್ಲಿ ಇಲ್ಲಿ ಒಗ್ಗೂಡಿ ಮಕ್ಕಳು ದೇವರ ದಾನ ಎಂದು ತಿಳಿದು ಅವರನ್ನು ಕ್ರಿಸ್ತೀಯ ವಿಶ್ವಾಸದಲ್ಲಿ ಪೋಷಿಸಬೇಕೆಂಬ ಜವಾಬ್ದಾರಿಯನ್ನು ನೆನಪಿಸಿಕೊಳ್ಳಲು ಬಂದಿದ್ದೇವೆ.

ಮಕ್ಕಳು ದೇವರ ಸ್ವರೂಪವನ್ನು ಹೊಂದಿದ್ದು, ಮನಃಪೂರ್ವಕವಾಗಿ ಹುಡುಕುವವರೆಲ್ಲರಿಗೂ ದೇವರ ರಾಜ್ಯವು ಸಿಕ್ಕುತ್ತದೆ ಎಂಬ ಸರಳ ಸತ್ಯತೆಯನ್ನು ಪ್ರಕಟಪಡಿಸುವವರಾಗಿದ್ದಾರೆ. ಪ್ರಬುದ್ಧರಾದ ನಮಗೆ ದೇವರು ಒಂದು ಉದ್ದೇಶವನ್ನು ಪೂರೈಸುವ ಆಜ್ಞೆಕೊಟ್ಟಿದ್ದಾನೆ. ಅದೇನೆಂದರೆ ದೇವರ ಮಾರ್ಗದಲ್ಲಿ ಮಗು ಬೆಳೆದು ದೇವರ ಯೋಜನೆ ಪ್ರತಿ ಮಗುವಿನಲ್ಲಿ ಸಂಪೂರ್ತಿಗೊಳ್ಳಬೇಕೆಂಬುವುದೇ

ನಮ್ಮ ಮಕ್ಕಳನ್ನು ದೇವರ ಹತ್ತಿರ ತರಲು ಹಾಗೂ ಈ ದೇಶದ ಜವಾಬ್ದಾರಿಯುತ ಪ್ರಜೆಗಳಾಗಿ ಅವರನ್ನು ಮಾಡಲು ನಮ್ಮ ಸಬ್ಬತ್/ಭಾನುವಾರ ಶಾಲೆಗಳನ್ನು ನಾವು ಸನ್ನದುಗೊಳಿಸೋಣವೋ?

ನಾವು ದೇವರ ಪ್ರಸನ್ನತೆಯಲ್ಲಿ ಬೇರೂರಿದ್ದು, ಮಕ್ಕಳ ಜೀವನದಲ್ಲಿ ದೇವರ ರಾಜ್ಯದ ಮೌಲ್ಯಗಳನ್ನು ನೆಡುವಂತೆ ಮಾಡಲು ದೇವರ ನಡೆಸುವಿಕೆ ಹಾಗೂ ಜ್ಞಾನವನ್ನು ಹುಡುಕೋಣ.

**ಸಭೆ – ತಂದೆಯೂ, ತಾಯಿಯೂ ಆದ ದೇವರೇ ನೀನು ನಮ್ಮ ಕುಟುಂಬಕ್ಕೂ ಹಾಗೂ ಸಭೆಗೂ ದಯಪಾಲಿಸಿದ ಶ್ರೇಷ್ಠ ಬಹುಮಾನಗಳಾದ ಈ ಮಕ್ಕಳ ಮನೆವಾರ್ತೆಯವರು ನಾವಾಗುವಂತೆ ನಮಗೆ ಸಹಾಯ ದಯಪಾಲಿಸು ಕ್ರಿಸ್ತೀಯ ವಿಶ್ವಾಸದಲ್ಲಿ ಅವರನ್ನು ಸಂರಕ್ಷಿಸಿ ಪ್ರಪಂಚದ ಸವಾಲುಗಳನ್ನು ಎದುರಿಸಲು ಸಿದ್ಧಪಡಿಸುವಂತೆ ನಮಗೆ ಸಹಾಯ ಮಾಡು ಆಮೆನ್.**

**ಆರಂಭ ಪ್ರಾರ್ಥನೆ:**

ನಿತ್ಯನೂ ಹಾಗೂ ನಂಬಿಗಸ್ತನೂ ಆದ ದೇವರೇ, ನಾವು ನಿನ್ನ ಹುಲ್ಲುಗಾವಲಿನ ಕುರಿಮರಿಗಳಾಗಿ ನಿನ್ನ ನೆಲೆಗೊಂಡಿರುವ ಪ್ರಸನ್ನತೆಯನ್ನೂ ಹಾಗೂ ಹಾದಿಯಲ್ಲಿಅನೇಕ ಅನುಭವವನ್ನು ನಾವು ಹೊಂದಿದ್ದೇವೆ. ನೀನು ನಮ್ಮನ್ನು ನಿರಂತರವಾದ ಪ್ರೀತಿಯಿಂದ ಪ್ರೀತಿಸಿ ನಿನ್ನ ಮಗನಾದ ಯೇಸುಕ್ರಿಸ್ತನನ್ನು ನಮ್ಮ ಜೀವನದ ಸಂರಕ್ಷಣೆಗೆ ಹಾಗೂ ರಕ್ಷಣೆಗೆ ಕಳುಹಿಸಿದ್ದಕ್ಕಾಗಿ ನಿನಗೆ ಕೃತಾರ್ಥರಾಗಿದ್ದೇವೆ. ನಿನ್ನ ವಾಕ್ಯದಲ್ಲಿ ಸಂರಕ್ಷಿಸಲ್ಪಡುವುದರ ಮೂಲಕ ನಾವು ಬಲಹೊಂದಿ ನಮ್ಮ ಸ್ನೇಹಿತರಿಗೆ ಹಾಗೂ ಕುಟುಂಬಕ್ಕೆ ನಿನ್ನ ಪ್ರೀತಿಯ ಸಾಧನಗಳಾಗುವಂತೆ ನಮ್ಮನ್ನು ಬಲಪಡಿಸು. ಪವಿತ್ರಾತ್ಮನ ಪ್ರೀತಿಯು ಈ ಭೂಮಿಯ ಮೇಲಿರುವ ನಾವು ನಾನಾ ವಿಧವಾದ ವಿಶ್ವಾಸಕ್ಕೆ ಸಂಬಂಧಪಟ್ಟ ನಮ್ಮ ನೆರೆಹೊರೆಯವರ ಜೊತೆಗೆ ಸಮಾಧಾನದಿಂದ ಜೀವಿಸಲು ನಮಗೆ ಸಹಾಯಮಾಡಲಿ.

ದೇವರೇ, ನಮಗೆ ದಾನವಾಗಿ ಕೊಟ್ಟ ತಲಾಂತು ಹಾಗೂ ಬಹುಮಾನಗಳಿಗಾಗಿ ವಂದನೆ, ಅದರ ಮೂಲಕ ಈ ಸೃಷ್ಟಿಯ ಸೌಂದರ್ಯದಲ್ಲಿ ಉಲ್ಲಾಸಿಸಲು ಹಾಗೂ ಈ ಭೂಮಿಯ ರಕ್ಷಣೆ ಮಾಡುವಂತೆ ಮಾಡಿದ್ದಿ. ನಾವು ಮಾಡುವ ಪ್ರತಿಯೊಂದು ಆಲೋಚನೆ, ಮಾತು ಹಾಗೂ ಕ್ರಿಯೆಗಳಲ್ಲಿ ನಿನ್ನ ಸ್ವರೂಪವನ್ನು ಬಿಂಬಿಸುವಂತೆ ಮಾಡು. ನಿನ್ನ ಪ್ರಸನ್ನತೆಯಲ್ಲಿ ನೆಲೆಗೊಂಡು ಈ ಆರಾಧನೆಯ ಮೂಲಕ ದೇವರು ಯಾವ ರೀತಿ ಮಕ್ಕಳ ಮುಖಾಂತರ ಮಾತನಾಡುತ್ತಾನೆ. ಎಂಬುದಾಗಿ ಅನುಭವಿಸುವಂತೆ ಮಾಡು. ಯೇಸುವಿನ ಹೆಸರಿನಲ್ಲಿ ಬೇಡಿದ್ದೇವೆ. ಆಮೆನ್.

ಮಕ್ಕಳಿಂದ ವಿಶೇಷ ಭಜನೆ ಅಥವಾ ವಿಶೇಷ ಗೀತೆ:

**ಪಾಪದರಿಕೆಯ ಪ್ರಾರ್ಥನೆ (ಮತ್ತಾಯ 18:1-14 ರ ಮೇಲೆ ಆಧಾರಿತ)**

ನಾಯಕ / ನಾಯಕಿ :–ಯೇಸು ಹೇಳಿದ್ದು, "ನೀವು ತಿರುಗಿಕೊಂಡು ಚಿಕ್ಕಮಕ್ಕಳಂತೆ ಆಗದೆ ಹೋದರೆ ನೀವು ಪರಲೋಕರಾಜ್ಯದಲ್ಲಿ ಸೇರುವುದೇ ಇಲ್ಲವೆಂದು ನಿಮಗೆ ಸತ್ಯವಾಗಿ ಹೇಳುತ್ತೇನೆ."

**ಸಭೆ – ನಿತ್ಯಕ್ಕೂ ಪ್ರೀತಿಸುವ ದೇವರೇ, ನಮ್ಮನ್ನು ನಾವು ಬದಲಿಸಿಕೊಂಡು ಮಕ್ಕಳಂತೆ ಆಗದೆ ಹೋಗಿ ಆ ಮೂಲಕ ಪರಲೋಕ ರಾಜ್ಯದಿಂದ ದೂರ ಉಳಿಯುವಂತಹ ಪಾಪಗಳನ್ನು ಮಾಡಿದ್ದಕ್ಕಾಗಿ ನಮ್ಮನ್ನು ಕ್ಷಮಿಸು.**

ನಾಯಕ / ನಾಯಕಿ :– "ಯಾವನು ಈ ಚಿಕ್ಕ ಮಗುವಿನಂತೆ ತನ್ನನ್ನು ತಗ್ಗಿಸಿಕೊಳ್ಳುತ್ತಾನೋ, ಅವನೇ ಪರಲೋಕ ರಾಜ್ಯದಲ್ಲಿ ಹೆಚ್ಚಿನವನು"

**ಸಭೆ – ಕನಿಕರವುಳ್ಳ ದೇವರೇ ನಿನ್ನ ಮುಂದೆ ತಗ್ಗಿಸಿಕೊಳ್ಳುವುದರಲ್ಲಿ ಕೊರತೆಯುಂಟಾಗಿ, ಪರಲೋಕ ರಾಜ್ಯದಿಂದ ದೂರ ಉಳಿದಿದ್ದಕ್ಕಾಗಿ ನಮ್ಮನ್ನು ಕ್ಷಮಿಸು.**

ನಾಯಕ / ನಾಯಕಿ :–"ನನ್ನ ಹೆಸರಿನಲ್ಲಿ ಇಂಥ ಒಂದು ಚಿಕ್ಕ ಮಗುವನ್ನು ಸೇರಿಸಿಕೊಂಡರೆ ನನ್ನನ್ನು ಸೇರಿಸಿಕೊಂಡ ಹಾಗಾಯಿತು."

**ಸಭೆ – ನಮ್ಮನ್ನು ಅಂಗೀಕರಿಸುವ ದೇವರೇ, ನಾವು ನಮ್ಮ ಮಕ್ಕಳನ್ನು ಅನ್ಯೋನ್ಯತೆಗೆ ಸೇರಿಸಿಕೊಳ್ಳುವಲ್ಲಿ ಹಾಗೂ ಆಹ್ವಾನ ಮಾಡುವಲ್ಲಿ ನಾವು ತೋರಿದ ಕೊರತೆಗಳನ್ನು ಕ್ಷಮಿಸು.**

ನಾಯಕ / ನಾಯಕಿ :– "ಆದರೆ ನನ್ನಲ್ಲಿ ನಂಬಿಕೆಯಿಡುವ ಈ ಚಿಕ್ಕವರಲ್ಲಿ ಒಬ್ಬನಿಗೆ ಯಾವನಾದರೂ ಅಡ್ಡಿಯಾದರೆ ಅಂಥವನ ಕೊರಳಿಗೆ ಬೀಸುವ ಕಲ್ಲು ಕಟ್ಟಿ ಅವನನ್ನು ಆಳವಾದ ಸಮುದ್ರದಲ್ಲಿ ಮುಳುಗಿಸಿಬಿಡುವುದು ಅವನಿಗೆ ಹಿತವಾಗುವುದು.

**ಸಭೆ – ಅತ್ಯಂತ ಹೆಚ್ಚಿನ ಪರಾಂಬರಿಕೆ ಮಾಡುವ ದೇವರೇ ನಾವು ನಮ್ಮ ಮಕ್ಕಳಿಗೆ ಆತ್ಮೀಕ ಆರೈಕೆ ಹಾಗೂ ಮಾನಸಿಕ ಭದ್ರತೆ ಕೊಡದೆ ಅವರಿಗೆ ಅಡ್ಡಿಯಾದ್ದರಿಂದ ನಮ್ಮನ್ನು ಕ್ಷಮಿಸು.**

ನಾಯಕ / ನಾಯಕಿ :–"ಈ ಚಿಕ್ಕವರಲ್ಲಿ ಒಬ್ಬನನ್ನಾದರೂ ತಾತ್ಸಾರ ಮಾಡಬಾರದು ನೋಡಿರಿ ಪರಲೋಕದಲ್ಲಿ ಅವರ ದೂತರು ನನ್ನ ತಂದೆಯ ಮುಖವನ್ನು ಯಾವಾಗಲೂ ನೋಡುತ್ತಲಿರುತ್ತಾರೆ. ಎಂದು ನಿಮಗೆ ಹೇಳುತ್ತೇನೆ.

**ಸಭೆ– ನ್ಯಾಯ ತೀರ್ಪಿನ ದೇವರೇ, ನಾವು ನಮ್ಮ ಮಕ್ಕಳನ್ನು ಜಾತಿ, ಬಣ್ಣ, ಸೌಂದರ್ಯ ಮತ್ತು ಜ್ಞಾನದ ಆಧಾರದ ಮೇಲೆ ತಾತ್ಸಾರ ಮಾಡಿದ್ದೇವೆ. ನಮ್ಮನ್ನು ಕ್ಷಮಿಸು.**

ನಾಯಕ / ನಾಯಕಿ :– ಯೇಸು ಹೇಳಿದ್ದು, "ಈ ಚಿಕ್ಕವರಲ್ಲಿ ಒಬ್ಬನಾದರೂ ಕೆಟ್ಟುಹೋಗುವುದು ಪರಲೋಕದಲ್ಲಿರುವ ನಿಮ್ಮ ತಂದೆಯ ಚಿತ್ತವಲ್ಲ"

**ಸಭೆ – ದಿವ್ಯಚಿತ್ತನೆರವೇರಿಸುವ ದೇವರೇ, ನಮ್ಮ ಮಕ್ಕಳನ್ನು ಪ್ರತಿಕೂಲ ಮತ್ತು ಸಂಬಂಧಪಡದ ವಾತಾವರಣದಲ್ಲಿ ಸುರಕ್ಷತೆಯಿಂದ ಕಾಪಾಡುವುದರಲ್ಲಿ ನಾವು ತೋರಿದ ಅಸಹಾಯಕತೆಯನ್ನು ಮನ್ನಿಸು.**

**ಪಾಪಕ್ಷಮಾಪಣೆ :** ಮಕ್ಕಳನ್ನು ನನ್ನ ಹತ್ತಿರಕ್ಕೆ ಬರಗೊಡಿಸಿರಿ 'ಅವುಗಳಿಗೆ ಅಡ್ಡಿಮಾಡಬೇಡಿರಿ, ದೇವರ ರಾಜ್ಯವು ಇಂಥವರದೇ' "ನಿಮಗೆ ಸತ್ಯವಾಗಿ ಹೇಳುತ್ತೇನೆ, ಯಾವನು ಶಿಶಭಾವದಿಂದ ದೇವರ ರಾಜ್ಯವನ್ನು ಅಂಗಿಕರಿಸುವುದಿಲ್ಲವೋ ಅವನು ಅದರಲ್ಲಿ ಸೇರುವುದೇ ಇಲ್ಲ" ಶಾಶ್ವತವಾಗಿ ಪ್ರೀತಿಸುವ ಹಾಗೂ ಕರುಣೆಯುಳ್ಳ ನಮ್ಮ ದೇವರು ನಾವು ನಮ್ಮ ಸುತ್ತಮುತ್ತಲಿನ ಜನರಿಗೆ ವಿಶೇಷವಾಗಿ ಮಕ್ಕಳಿಗೆ ದೇವರ ಪ್ರೀತಿಯ ಸಾಧನಗಳಾಗುವಂತೆ ನಮ್ಮನ್ನು ಬಲಪಡಿಸಲಿ.

**ಕೃತಜ್ಞತೆಯ ಪ್ರಾರ್ಥನೆ:**

ಸರ್ವಶಕ್ತನಾದ ದೇವರೇ ನಾವು ನಿನ್ನನ್ನು ಆರಾಧಿಸುತ್ತೇವೆ. ನಿನ್ನ ದೈವಿಕ ಅನುಗ್ರಹದಲ್ಲಿ ನಮ್ಮನ್ನು ನಿನ್ನ ಸ್ವರೂಪದಲ್ಲಿ ಉಂಟುಮಾಡಿ, ನಿನ್ನ ಮಹಿಮೆ ಮತ್ತು ಒಳ್ಳೆತನವನ್ನು ಪ್ರತಿಬಿಂಬಿಸುವಂತೆ ಮಾಡಿದ್ದೀ ನೀನು ಎಲ್ಲಾ ಸ್ತುತಿ ಹಾಗೂ ಗೌರವಗಳಿಗೆ ಅರ್ಹನು ಹಾಗೂ ನೀನು ನಿನ್ನ ರಾಜ್ಯವನ್ನು ಮಕ್ಕಳಿಗೆ ಸಮಾನವಾಗಿ ಮಾಡಿದ್ದೀ. ಮಾನವೀಯತೆಯನ್ನು ಮಕ್ಕಳ ಮೂಲಕ ಕಲಿಸಿದಿ ಹಾಗೂ ನೀನು ಮಕ್ಕಳ ಗೌರವ ಮತ್ತು ಮೌಲ್ಯವನ್ನು ಹಿರಿಯರ ಮುಂದೆ ಎತ್ತಿಹಿಡಿದಿದ್ದೀ. ನೀನು ಮಕ್ಕಳಿಗೆ ಅಭ್ಯಂತರ ಮಾಡುವವರನ್ನು ಎಚ್ಚರಪಡಿಸುವುದರ ಮೂಲಕ ಮಕ್ಕಳ ಹಕ್ಕನ್ನು ಧೃಡಪಡಿಸಿದ್ದಿ. ನಾವು ಈ ಸಭೆಯಾಗಿ ಮಕ್ಕಳಾಗಿ ನಮ್ಮ ಸಭಾಪಾಲಕರಿಗಾಗಿ, ಸಬ್ಬತ್ ಶಾಲಾಶಿಕ್ಷಕರಿಗಾಗಿ, ಹಿರಿಯರಿಗಾಗಿ ಹಾಗೂ ತಂದೆತಾಯಿಗಳಿಗಾಗಿ, ಅವರ ಕರಾರಿಲ್ಲದ ಪ್ರೀತಿ ಹಾಗೂ ನಮ್ಮ ಪ್ರತಿಯೊಬ್ಬರ ಪ್ರೀತಿ ಆರೈಕೆಗಾಗಿ ನಿನಗೆ ಸದಾ ಕೃತಜ್ಞರಾಗಿದ್ದೇವೆ. ನಾವು ಅನುಭವಿಸುವ ಎಲ್ಲಾ ವಿಶೇಷ ಹಕ್ಕುಗಳನ್ನು ನೆನೆಸಿಕೊಳ್ಳುತ್ತೇವೆ ಹಾಗೂ ಇಂತಹ ವಿಶೇಷ ಹಕ್ಕುಗಳಿಂದ ವಂಚಿತರಾದ ಮಕ್ಕಳನ್ನು ನಮ್ಮ ಪ್ರಾರ್ಥನೆಗಳಲ್ಲಿ ಜ್ಞಾಪಿಸಿಕೊಳ್ಳುತ್ತೇವೆ. ನಿನ್ನ ನಾಮವು ನಮ್ಮಲ್ಲಿ ನಮ್ಮ ಜೀವನದ ಮುಖಾಂತರ ಪ್ರಭಾವ ಹೊಂದಲಿ ಆಮೆನ್.

(ಮಕ್ಕಳು ತಾವು ಗರ್ಭಗುಡಿಯ ಮೇಜಿನ ಮೇಲೆ ಇಡಲ್ಪಟ್ಟ ಬಹುಮಾನಗಳನ್ನು ತಮ್ಮೊಳಗೆ ವಿನಿಮಯ ಮಾಡಿಕೊಳ್ಳಬಹುದು.)

**ಸಭೆ – ಶ್ರೇಷ್ಠ ಗುರುವಾದ ದೇವರೇ, ನಿನ್ನ ಮಕ್ಕಳನ್ನು ಜ್ಞಾನದಲ್ಲಿ ಬೆಳಸಿ, ಕಾಯುವಾತನೇ, ನಾವು ನಿನ್ನ ವಾಕ್ಯಕ್ಕೆ ವಿಧೇಯತೆಯಿಂದ ಆಲೈಸುವವರಾಗುವಂತೆ ಮಾಡು. ನಿನ್ನಲ್ಲಿ ಬಲಹೊಂದಲು ನಮ್ಮನ್ನು ರೂಪಿಸು. ನಿನ್ನ ಸರ್ವಾಯುಧಗಳಿಂದ ನಮ್ಮನ್ನು ತೊಡಿಸು, ನಾವು ಸುವಾರ್ತೆಯ ದಿಟ್ಟತನದ ರಹ್ಯಸಗಳಲ್ಲಿ ದೃಢವಾಗಿ ನಿಲ್ಲುತ್ತಾ ಈ ಮುಖಾಂತರ ನಾವು ನಿನ್ನ ಜ್ಞಾನಕ್ಕೆ ನಮ್ರತೆಯುಳ್ಳವರಾಗಿ ಹಾಗೂ ಚಿಕ್ಕ ಮಕ್ಕಳಂತೆ ಪರಿವರ್ತಿತರಾಗಿ ನಿನ್ನ ವಾಕ್ಯದಲ್ಲಿ ಸಂರಕ್ಷಿಸಲ್ಪಟ್ಟು, ಈ ಲೋಕದ ಕೆಡುಕುಗಳನ್ನು ಜಯಿಸಲು ಶಕ್ತರನ್ನಾಗಿಸು. ತಂದೆಯೊಂದಿಗೂ ಪವಿತ್ರಾತ್ಮನೊಂದಿಗೂ ಕೂಡಿ ಏಕದೇವರಾಗಿ ಸದಾಜೀವಿಸಿ ಆಳುವ ನಿನಗೆ ಸ್ತೋತ್ರ. ಆಮೆನ್.**

ಸತ್ಯವೇದ ಪಾರಾಯಣ – ಮಕ್ಕಳು (ಸುವಾರ್ತಾ ಭಾಗದ ನಾಟಕ ರೂಪವನ್ನು ಸಬ್ಬತ್‌ಶಾಲಾ ಮಕ್ಕಳಿಂದ ಮಾಡಲು ಯೋಜಿಸಬಹುದು)

ಹಳೇ ಒಡಂಬಡಿಕೆ – ಜ್ಞಾನೋಕ್ತಿಗಳು 23 ; 15-26

ಕೀರ್ತನೆ – 127

ಪತ್ರಿಕಾ ಬಾಗ – ಎಫೆಸ 6;10-18

ಸುವಾರ್ತಾ ಭಾಗ –ಮತ್ತಾಯ 18;1-6

ಸಂಗೀತ –

ಸಭಾಪ್ರಕಟಣೆಗಳು –

ವಿಶೇಷಗೀತೆ/ಕಿರುನಾಟಕ/ಸಬ್ಬತ್ ಶಾಲಾ ಮಕ್ಕಳಿಂದ ಕಾರ್ಯಕ್ರಮ

ಪ್ರಸಂಗ – ಪ್ರಮುಖವಾಗಿ ಸಬ್ಬತ್ ಶಾಲಾ ಹಿರಿಯ ವಿಧ್ಯಾರ್ಥಿ/ಕ್ರೈಸ್ತ ಶಿಕ್ಷಣ ತಜ್ಞ/ಸಬ್ಬತ್ ಶಾಲಾ ಶಿಕ್ಷಕರಿಂದ.

ಅಪೊಸಲಿಕ ವಿಶ್ವಾಸ ಪ್ರಮಾಣ:

ಕಾಣಿಕೆ : ಸಂಗೀತ / ಕೀರ್ತನೆ

ದೃಢನಿರ್ಧಾರದ ಕೃತ್ಯ – ಪ್ರಾಯಸ್ಥರು ಮಕ್ಕಳನ್ನು ವಿಶ್ವಾಸದಲ್ಲಿ ಬೆಳೆಸುತ್ತೇನೆ. ಎಂಬುದನ್ನು ಖಚಿತಪಡಿಸಿಕೊಳ್ಳುವ ಯಾವುದೇ ಚಟುವಟಿಕೆ.
(ಸಸಿಯನ್ನು ನೆಡುವುದು ಸಸಿಗಳನ್ನು ಹಂಚುವುದು ಅಥವಾ ಯಾವುದಾದರೂಚಟುವಟಿಕೆ ಮೂಲಕ ಪ್ರಾಯದವರು ಮಕ್ಕಳನ್ನು ವಿಶ್ವಾಸದಲ್ಲಿ ಬೆಳೆಸುತ್ತೇವೆ ಎಂಬುದನ್ನುದೃಢಪಡಿಸುವುದು.)

ಪ್ರಾರ್ಥನಾ ಮಾಲೆ: (ಪ್ರತಿ ಪ್ರಾರ್ಥನೆ ಆರಂಭವಾಗುವಾಗ ಮಕ್ಕಳು ಬಂದು ಮೇಣದ ಬತ್ತಿಯನ್ನು ಹೊತ್ತಿಸುವುದು)

ನಾಯಕ / ನಾಯಕಿ :– ಯೆಹೋವ ಯೀರೆ, ಎಲ್ಲರ ಅವಶ್ಯಕತೆಯನ್ನು ಪೂರೈಸುವವನೇ, ಬಡತನ ರೇಖೆಯಲ್ಲಿ ಬಳಲುವ ಮಕ್ಕಳು ಆಹಾರ, ವಸತಿ ಹಾಗೂ ಶಿಕ್ಷಣ ಪಡಕೊಳ್ಳುವಂತೆ ಅವರಿಗೆ ಸಹಾಯಮಾಡಬೇಕೆಂದು ನಿನ್ನನ್ನು ಬೇಡಿಕೊಳ್ಳುತ್ತೇವೆ. ಬಡತನ ಏಕೈಕ ವ್ಯಕ್ತಿಯ ಪಾಪವಲ್ಲ. ಆದರೆ ಸಂಘಗಳು ಸಹ ಮಾನವನ ಬೇಡಿಕೆಗಳಿಗೆ ಸ್ಪಂದಿಸದ ಕಾರಣದಿಂದ ಉಂಟಾದ ಕೃತ್ಯವಾಗಿದೆ. ನಮ್ಮ ಸಮಾಜವು ನ್ಯಾಯಕ್ಕಾಗಿ ಹುಡುಕಿ, ಎಲ್ಲರಿಗೂ ಪರಿಪೂರ್ಣವಾದ ಬಾಳನ್ನು ಭದ್ರಪಡಿಸುವಂತೆ ಅದನ್ನು ಕಟ್ಟು.

**ಸಭೆ – ಪ್ರಭುವೇ, ನಿನ್ನ ಕರುಣೆಯಲ್ಲಿ ನಮ್ಮ ಪ್ರಾರ್ಥನೆಯನ್ನು ಕೇಳು.**

ನಾಯಕ / ನಾಯಕಿ :– ಯೆಹೋವ ಶಾಲೋಮ್, ಎಲ್ಲಾ ಮನುಷ್ಯರಿಗೂ ಹಾಗೂ ಭೂಮಿಗೂ ಶಾಂತಿಯನ್ನು ದಯಪಾಲಿಸುವವನೇ ನಮ್ಮ ಮಕ್ಕಳ ಜೀವಿತದಲ್ಲಿ ಸಂದಿಗ್ಧ ಪರಿಸ್ಥಿತಿಗಳು ಬಂದಾಗ ನೀನು ಅವರ ಜೀವಿತದಲ್ಲಿ ಮಧ್ಯಸ್ಥಿಕೆ ವಹಿಸಿ ಶಾಂತಿಯನ್ನು ದಯಪಾಲಿಸುವುದರ ಮೂಲಕ ಅವರ ಗೌರವ ಹಾಗೂ ಮೌಲ್ಯವನ್ನು ಭದ್ರಪಡಿಸು. ಮಕ್ಕಳ ವ್ಯಾಪಾರ ಮಾಡಿ, ಬಾಲಕಾರ್ಮಿಕರ ಪದ್ಧತಿಗೆ ಒಳಪಡಿಸಿ ಅವರನ್ನು ದೈಹಿಕ ಹಾಗೂ ಲೈಂಗಿಕ ದುರುಪಯೋಗ ಮಾಡಿಕೊಳ್ಳುವ ಮೂಲಕ ನಿಷ್ಕರುಣೆಯಿಂದ ಕಾರ್ಯವೆಸಗುವ ಪ್ರಾಯಸ್ಥರನ್ನು ಎಚ್ಚರಿಸಿ ಅವರ ಕೆಟ್ಟ ಮಾರ್ಗವನ್ನು ಬದಲಿಸಿಕೊಳ್ಳುವಂತೆ ಸಹಾಯಮಾಡು. ಮಕ್ಕಳಿಗಾಗಿ ನಿನ್ನ ನ್ಯಾಯದ ಸಾಧನಗಳಾಗುವಂತೆ ಮಕ್ಕಳ ಹಕ್ಕುಗಳ ಕಾರ್ಯಕರ್ತರು ಹಾಗೂ ಅವರಿಗಾಗಿ ಕೆಲಸ ಮಾಡುವವರನ್ನು ಎಬ್ಬಿಸು.

**ಸಭೆ – ಕರ್ತನೇ ನಿನ್ನ ಕರುಣೆಯಲ್ಲಿ ನಮ್ಮ ಪ್ರಾರ್ಥನೆಯನ್ನು ಕೇಳು.**

ನಾಯಕ / ನಾಯಕಿ :– ಯೆಹೋವ ರಾಫಾ, ಒಡೆದ ಹೃದಯಗಳನ್ನು ಕಟ್ಟುವವನೇ ಯುದ್ಧ, ವಲಸೆಹೋಗುವಿಕೆ ಹಾಗೂ ಸಮಾಜದಲ್ಲಿ ಜಾತಿ, ವರ್ಗ, ಲಿಂಗ, ವಯಸ್ಸಿನಿಂದ ಭೇದಭಾವಗಳಿಂದ ಗಾಯಗೊಳಗಾದ ಶರೀರ ಹಾಗೂ ಮಾನಸಿಕವಾಗಿ ನೊಂದ ಮಕ್ಕಳ ಮೇಲೆ ನಿನ್ನ ವಾಸಿಮಾಡುವ ಸ್ಪರ್ಶವು ಉಂಟಾಗಲೆಂದು ನಿನಗೆ ಮೊರೆಯಿಡುತ್ತೇವೆ. ಸಮಾಜದಲ್ಲಿ ರೂಢಿಯಲ್ಲಿರುವ ಭೇದಭಾವ ಪದ್ಧತಿಯು ಮೃದುವಾದ ಮಕ್ಕಳ ಹೃದಯಗಳನ್ನು ಜಜ್ಜದಂತೆ, ಮಕ್ಕಳು ಕಷ್ಟದ ಸಂದರ್ಭಗಳಲ್ಲಿ ಪ್ರಾಯಸ್ಥರು ಅವರ ಸುತ್ತಲೂ ಇರುವುದರ ಮೂಲಕ ಮಕ್ಕಳು ಸಮಾಧಾನ ಧೈರ್ಯವನ್ನು ಪಡೆಯುವಂತೆ ಮಾಡು. ಪ್ರಾಯಸ್ಥರು ಆರೋಗ್ಯಕರವಾದ ಸಮಾಜವನ್ನು ಮಕ್ಕಳಿಗಾಗಿ, ಮನುಕುಲಕ್ಕಾಗಿ ಕಟ್ಟುವ ಪ್ರಾಮುಖ್ಯತೆಯನ್ನು ಅರಿತುಕೊಳ್ಳುವಂತೆ ಮಾಡು.

**ಸಭೆ – ಕರ್ತನೇ ನಿನ್ನ ಕರುಣೆಯಲ್ಲಿ ನಮ್ಮ ಪ್ರಾರ್ಥನೆಯನ್ನು ಕೇಳು.**

ನಾಯಕ / ನಾಯಕಿ :– ಯೆಹೋವ ನಿಸ್ಸಿ, ನಿನ್ನ ಆಳ್ವಿಕೆಯಡಿಯಲ್ಲಿ ನಮ್ಮನ್ನು ಜಯಕ್ಕೆ ನಡಿಸುವವನೇ ನಮ್ಮ ಚಿಕ್ಕ ಮಕ್ಕಳು ಮನೆಗಳಲ್ಲಿ ಹಾಗೂ ಸಮಾಜದಲ್ಲಿ ಹಲವು ವಿಧಗಳ ಕಹಿ ಅನುಭವದ ಮೂಲಕ ಹಾದುಹೋಗುವಾಗ ನಿನ್ನ ಜಯದ ಪ್ರಸನ್ನತೆಯನ್ನು ಬೇಡುವವರಾಗಿದ್ದೇವೆ. ನಮ್ಮ ಮಕ್ಕಳು ಪ್ರತಿನಿತ್ಯವೂ ತಮ್ಮ ಜೀವಿತದಲ್ಲಿ ನಿನ್ನ ಕೃಪೆಯ ಮಧ್ಯಸ್ಥಿಕೆಯನ್ನು ಅಪೇಕ್ಷಿಸುವಾಗ ನೀನು ಅವರಿಗೆ ಜಯವನ್ನು ನೀಡೆಂದು ಪ್ರಾರ್ಥಿಸುತ್ತೇವೆ. ದೇವರ ಕೃಪೆಯ ಮುಖಾಂತರ ನಮ್ಮ ಮಕ್ಕಳು ಪ್ರಸ್ತುತ ಸ್ನಿವೇಶದಲ್ಲಿ ಕೆಡುಕುಗಳನ್ನು ಜಯಿಸಿ, ಜಯದ ಜೀವಿತವನ್ನು ಜೀವಿಸಬಲ್ಲರು ಎಂಬುದಾಗಿ ನಾವು ನಿರಂತರವಾಗಿ ನಂಬುವಂತೆ ನಮ್ಮನ್ನು ಪ್ರೇರೇಪಿಸು.

**ಸಭೆ – ಪ್ರಭುವೇ, ನಿನ್ನ ಕರುಣೆಯಲ್ಲಿ ನಮ್ಮ ಪ್ರಾರ್ಥನೆಯನ್ನು ಕೇಳು.**

ನಾಯಕ / ನಾಯಕಿ :– ನಾವು ಕೆಲವು ಕ್ಷಣ ನಮ್ಮ ಸಬ್ಬತ್ ಶಾಲಾ ಶಿಕ್ಷಕರು ಹಾಗೂ ಮಕ್ಕಳಿಗಾಗಿ ಮೌನವಾಗಿ ಪ್ರಾರ್ಥಿಸುವ. ಸಬ್ಬತ್ ಶಾಲೆಯಲ್ಲಿ ಮಕ್ಕಳು ಕಳೆದ ಸಮಯವು ಅವರನ್ನು ಜ್ಞಾನಾಭಿವೃದ್ಧಿಪಡಿಸಿ ದೇವರ ಕೃಪೆಯಲ್ಲಿಯೂ ಹಾಗೂ ಇತರರ ದಯೆಗೆ ಪಾತ್ರರಾಗುವಂತೆ ಮಾಡಲಿ, ನಮ್ಮ ಎಲ್ಲಾ ಪ್ರಾರ್ಥನೆ ಹಾಗೂ ಭಿನ್ನಹಗಳನ್ನು ಕರ್ತನ ಪ್ರಾರ್ಥನೆಯ ವಾಕ್ಯಗಳ ಮೂಲಕ ಒಟ್ಟುಗೂಡಿಸೋಣ, ಆಮೆನ್.

**ಅಂತಿಮ ಪ್ರಾರ್ಥನೆ:**

ನಮ್ಮ ಪ್ರೀತಿಯ ಹಾಗೂ ಸದಾಜೀವಿಸುವ ದೇವರೇ, ಮಕ್ಕಳಾಗಿ ನಾವು ಈ ಸಬ್ಬತ್‌ದಿನದ ಆರಾಧನೆಯನ್ನು ನಡೆಸುವಂತೆ ಮಾಡಿದ್ದಕ್ಕಾಗಿ ನಿನಗೆ ಕೃತಜ್ಞತೆಗಳನ್ನು ಅರ್ಪಿಸುತ್ತೇವೆ. ಈ ಆರಾಧನೆಯಲ್ಲಿ ಮಕ್ಕಳ ಯಾಜಕತ್ವವನ್ನು ಅನುಭವಿಸುವಂತೆ ನೀನು ನಮ್ಮ ಜೀವಿತದಲ್ಲಿ ಸೇರಿಸಿದ ಈ ಶ್ರೇಷ್ಠ ಹಾಗೂ ಅತ್ಯುತ್ತಮವಾದ ಅನುಭವಕ್ಕಾಗಿ ನಿನಗೆ ವಂದನೆಗಳು. ನಾವು ನಿನಗೆ ಮೀಸಲಾಗಿದ್ದೇವೆ. ಹಾಗೂ ನೀನೇ ನಮ್ಮ ದೇವರು. ಮುರಿಯಲ್ಪಟ್ಟ ಈ ಪ್ರಪಂಚದಲ್ಲಿ ನಿನ್ನ ಪ್ರೀತಿಯನ್ನು ಲೋಕಕ್ಕೆ ಬೆಳಕಾಗಿ ಹಾಗೂ ಭೂಮಿಗೆ ಉಪ್ಪಾಗಿ ಸಾರಲು ನಮ್ಮನ್ನು ಬಲಪಡಿಸು. ನಿನ್ನ ಸಂರಕ್ಷಣೆಯಲ್ಲಿ ನಮ್ಮನ್ನು ಇರಿಸಿ ನಿನ್ನ ಜ್ಞಾನ ಹಾಗೂ ದಯೆಯಲ್ಲಿ ಬೆಳೆಯುವಂತೆ ಸಹಾಯಮಾಡು. ಯೇಸು ಕ್ರಿಸ್ತನ ಹೆಸರಿನಲ್ಲಿ ಆಮೆನ್.

**ಅಂತ್ಯಾಶೀರ್ವಾದ:**

ನಮ್ಮ ಕರ್ತನಾದ ಯೇಸುಕ್ರಿಸ್ತನ ಕೃಪೆಯೂ, ದೇವರ ಪ್ರೀತಿಯೂ, ಪವಿತ್ರಾತ್ಮನ ಅನ್ಯೋನ್ಯತೆಯೂ ನಿಮ್ಮೆಲ್ಲರ ಸಂಗಡ, ಇಂದಿಗೂ ಎಂದೆಂದಿಗೂ ಇರಲಿ ಆಮೆನ್.

*************************

(ಕರ್ತನ ಭೋಜನ ಸಂಸ್ಕಾರ ಮುಂದೆ ನಡೆಯಬಹುದು.)